ಪಿ.ಡಬ್ಲ್ಯೂ-1

<u>ದಿನಾಂಕ 16-10-2024 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಶ್ರೀ.ಟಿ.ಟಿ.ಎಮ್ ವಕೀಲರಿಂದ ವಾದಿ- ಪರವಾಗಿ</u>

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದ್ದು, ಅದನ್ನು ತಯಾರಿಸಲು ಗೌರವಾನ್ವಿತ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ಸರಿಯಾಗಿರುತ್ತವೆ ಮತ್ತು ಸತ್ಯವಾಗಿರುತ್ತವೆ ಎಂದು ಈ ಮೂಲಕ ಪ್ರಮಾಣಿಸಿಕರಿಸುತ್ತೇನೆ.

ನಾನು ಈಗ ಸರ್ವೆ ನಂ.56/2/1, 56/2/2, 15/4 ಗಳ 1998-1999 ರಿಂದ 2002-2003 ರವರೆಗಿನ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-3 ಎಂದು, ಸರ್ವೆ ನಂ.56/2 ರ 2022-23 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿಪಿ-4 ಎಂದು, ಸರ್ವೆ ನಂ.56/2/2 ರ 2020-21 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿಪಿ-5 ಎಂದು, ಸರ್ವೆ ನಂ.15/4 ರ 2022-23 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸಿದ್ದಪ್ಪ ಶಂಕ್ರೆಪ್ಪ ಒಡೆಯರರವರ ಹೆಸರಿನಲ್ಲಿ ಬಿದರಿ ಗ್ರಾಮದಲ್ಲಿ ಇದ್ದ ಆಸ್ತಿಗಳ ನಮೂನೆ 24/ಅ ಖಾತಾ ಉತಾರೆ ಹಾಜರಪಡಿಸಿದ್ದು ಅದನ್ನು ನಿಪಿ-7 ಎಂದು, ಆಸ್ತಿ ಸಂಖ್ಯೆ 109 ರ ಮನೆ ಉತಾರೆ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-8 ಎಂದು, ಮುಟೇಶನ ಎಂಟ್ರಿ ಸಂಖ್ಯೆ ಎಚ್.24/2020-21 ರ ಮುಟೇಶನ ಪ್ರತಿ ಹಾಜರಪಡಿಸಿದ್ದು ಅದನ್ನು ನಿಪಿ-9 ಎಂದು, ಸದರಿ ಮುಟೇಶನಗಾಗಿ ನೀಡಿದ ನೋಟಿಸ್‌ನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-10 ಎಂದು, ಅಸಲು ದಾವಾ ಸಂಖ್ಯೆ 128/2018 ರ ವಾದ ಪತ್ರ, ಸದರಿ ದಾವೆಯಲ್ಲಿ ರಾಜೀ ಆದ ಬಗ್ಗೆ ರಾಜೀ ಅರ್ಜಿ ಮತ್ತು ರಾಜೀ ಡಿಕ್ರಿಗಳ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-11 ರಿಂದ ನಿಪಿ-13 ಎಂದು, ಪ್ರಾಂಶುಪಾಲರು, ಬಾಲಕಿಯರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಯಾವಗಲ್ ಇವರು ನೀಡಿದ ವಾದಿಯ ಜನ್ಮ ದಾಖಲಾತಿ ದೃಢೀಕರಣ ಪತ್ರವನ್ನು ಹಾಜರಪಡಿಸಿದ್ದು ಅದನ್ನು ನಿಪಿ-14 ಎಂದು, ವಾದಿಯ ಜನನ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದನ್ನು ನಿಪಿ-15 ಎಂದು, ವಾದಿಯ ತಂದೆ ಬಸಪ್ಪ ಒಡೆಯರ ಇವರ ಮರಣ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದನ್ನು ನಿಪಿ-16 ಎಂದು, ಮುಟೇಶನ ಎಂಟ್ರಿ ಸಂಖ್ಯೆ 1865 ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯಿತು.

**ಪಿ.ಡಬ್ಲ್ಯೂ-1**

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )
ಓ . ಹೇ. ಕೆ . ಸರಿ ಅದೆ .

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ